# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ: 25 • ನೋಂದಣಿ ನಂ.:KARKAN27911 • ವಿಜಯನಗರ • 19.07.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 25 • Reg.No:KARKAN27911 • VIJAYANAGARA • 19.07.2024 • Friday • Page:04 • Rs:2



ಮನಸ್ಸು ಮಾಡು ಕರ್ತವ್ಯ ನಿಷ್ಟನಾಗು ಕಾದು ನೋಡು

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com


# ವಿಜಯನಗರ ಕಾಲುವೆಗಳಿಗೆ ನೀರು

## ನೀರಾವರಿ ಸಮಿತಿ ಅಧ್ಯಕ್ಷ ಶಿವರಾಜ ಎಸ್. ತಂಗಡಗಿ ಸೂಚನೆ। ನೀರನ್ನು ಮಿತವಾಗಿ ಬಳಸಿ

## ಟಿಬಿ ಡ್ಯಾಂಗೆ 1 ಲಕ್ಷ ಕ್ಯೂಸೆಕ್ಸ್ ನೀರು ಒಳಹರಿವು । 46.80 ಟಿ.ಎಂ.ಸಿ ನೀರು ಸಂಗ್ರಹ

**ಹಂಪಿ ಟೈಮ್ಸ್ ಹೊಸಪೇಟೆ**



ಪ್ರಸ್ತಕ ಸಾಲಿನಲ್ಲಿ ಮುಂಗಾರು- ಹಂಗಾಮಿನಲ್ಲಿ ಮಳೆ ತೀವ್ರತೆ ಹೆಚ್ಚು ಇರುವುದರಿಂದ ಜಲಾನಯನ ಪ್ರದೇಶದಲ್ಲಿ ಸಾಕಷ್ಟು ಒಳಹರಿವು ಪ್ರಾರಂಭವಾಗಿದೆ. ಪ್ರಸ್ತುತ ತುಂಗಭದ್ರಾ ಜಲಾ ಶಯದಲ್ಲಿ ಸುಮಾರು 46.80 ಟಿ.ಎಂ.ಸಿ ನೀರು ಸಂಗ್ರಹಣೆಯಾಗಿದ್ದು, ಒಳಹರಿವು ಸುಮಾರು 1 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಪ್ರಯುಕ್ತ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಜನಪ್ರತಿನಿಧಿಗಳು ಹಾಗೂ ರೈತ ಮುಖಂಡರುಗಳೊಡನೆ ಚರ್ಚಿಸಿ, ತುಂಗಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳಿಗೆ ನೀರು ಹರಿಸುವಂತೆ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷ ಶಿವರಾಜ ಎಸ್. ತಂಗಡಗಿ ಅವರು ಸೂಚನೆ ನೀಡಿದ್ದಾರೆ.

ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳಿಗೆ ಮುಂಗಾರು ಹಂಗಾಮಿಗೆ ವೇಳಾ ಪಟ್ಟಿಯಂತೆ ಕಾಲುವೆವಾರು ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕನೀನಿನಿ, ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿಗಳಾದ ಎಲ್. ಬಸವರಾಜ್ ತಿಳಿಸಿದ್ದಾರೆ.

**ರೈತ ಭಾಂದವರಲ್ಲಿ ಮನವಿ:**

ತುಂಗಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಮಿತವ್ಯಯವಾಗಿ ಬಳಸಿ ಅಧಿಕೃತ ಅಚ್ಚುಕಟ್ಟು ಪ್ರದೇಶದಲ್ಲಿ ನಿಗಧಿತ ಬೆಳೆಗಳನ್ನು ಮಾತ್ರ ಬೆಳೆಯಲು ಹಾಗೂ ಸಮರ್ಪಕ ನೀರು ನಿರ್ವಹಣೆಗೆ ಇಲಾಖೆಯೊಡನೆ ಸಹಕರಿಸಲು ರೈತ ಭಾಂದವರಲ್ಲಿ ಕೋರಲಾಗಿದೆ.

ಪ್ರಸಕ್ತ ಅಂದಾಜಿಸಿದ ನೀರಿನ ಪ್ರಮಾಣವು ತುಂಗಭದ್ರಾ ಜಲಾಶಯಕ್ಕೆ ಹರಿದು ಬರುವ ಒಳಹರಿವಿನ ಪ್ರಮಾಣದ ಮೇಲೆ ಅವಲಂಬಿತವಾಗಿದ್ದು, ಮುಂದೆ ಒಳ ಹರಿವಿನ ಪ್ರಮಾಣದಲ್ಲಿ ಕೊರತೆ ಉಂಟಾದಲ್ಲಿ ಪರಿಷ್ಕೃತ ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ.

### ನೀರು ಹರಿಸುವ ವೇಳಾಪಟ್ಟಿ

**ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ:** ಜು.19 ರಿಂದ ಸರಾಸರಿ 4100 ಕ್ಯೂಸೆಕ್ಸ್‌ನಂತೆ ನೀರು ಹರಿಸಲಾಗುವುದು.

**ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆ:** ಜು.19 ರಿಂದ ಆ.03 ರಿಂದ ಸರಾಸರಿ 25 ಕ್ಯೂಸೆಕ್ಸ್‌ನಂತೆ ನೀರು ಹರಿಸಲಾಗುವುದು..

**ತುಂಗಭದ್ರಾ ಬಲದಂಡೆ ಕೆಳಮಟ್ಟದ ವಿತರಣಾ ಕಾಲುವೆ:** ಜು.19 ರಿಂದ ಸರಾಸರಿ 650 ಕ್ಯೂಸೆಕ್ಸ್‌ನಂತೆ ನೀರು ಹರಿಸಲಾಗುವುದು.

**ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ವಿತರಣಾ ಕಾಲುವೆ:** ಜು.22 ರಿಂದ ಸರಾಸರಿ 1300 ಕ್ಯೂಸೆಕ್ಸ್‌ನಂತೆ ನೀರು ಹರಿಸಲಾಗುವುದು.

**ರಾಯ ಬಸವಣ್ಣ ಕಾಲುವೆ:** ಈಗಾಗಲೇ ಜು.01 ರಿಂದ 180 ಕ್ಯೂಸೆಕ್ಸ್‌ನಂತೆ ಹರಿಬಿಡಲಾಗುತ್ತಿದೆ.

**ನದಿ ಪೂರಕ:** ಸುಮಾರು 1000 ಕ್ಯೂಸೆಕ್ಸ್ ಮತ್ತು ಕಾರ್ಖಾನೆಗಳಿಗೆ 60 ಕ್ಯೂಸೆಕ್ಸ್ ನಂತೆ ನೀರು ಹರಿಸಲಾಗುವುದು.

# ಗ್ರಾಮಸ್ಥರ ಅಹವಾಲು ಆಲಿಸಿದ ಶಾಸಕ ಹೆಚ್.ಆರ್.ಗವಿಯಪ್ಪ

## ವಿವಿಧ ಗ್ರಾಮಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗೆ ಚಾಲನೆ





**ಹಂಪಿ ಟೈಮ್ಸ್ ಹೊಸಪೇಟೆ**

ಶಾಸಕ ಹೆಚ್.ಆರ್.ಗವಿಯಪ್ಪ ಅವರು ಮಲಪನಗುಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಾದ ಕಡ್ಡಿರಾಂಪುರ ತಾಂಡ, ಗಾಳೆಮ್ಮನಗುಡಿ, ಹೊಸ ಮಲಪನಗುಡಿ ಮತ್ತು ಹಳೆ ಮಲಪನಗುಡಿ ಗ್ರಾಮಗಳಿಗೆ ಇತ್ತೀಚೆಗೆ ಖುದ್ದು ಭೇಟಿ ನೀಡಿ ಗ್ರಾಮಸ್ಥರ ಆಹವಾಲು ಆಲಿಸಿದರು. ಬಳಿಕ ಶಾಸಕರ ಜನ ಸಂಪರ್ಕ ಸಭೆ ನಡೆಸಿ ಜನತೆಗೆ ಸ್ಪಂದನೆ ನೀಡಿದರು.

ವಿವಿಧ ಇಲಾಖೆಯ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ಗ್ರಾಮ ಸಂಚಾರ ಕೈಗೊಂಡ ಶಾಸಕರು, ಮೊದಲಿಗೆ ಕಡ್ಡಿರಾಂಪುರ ತಾಂಡಾ ಮತ್ತು ಕಡ್ಡಿರಾಂಪುರ ಗ್ರಾಮಕ್ಕೆ ತೆರಳಿ ಮನೆಮನೆ ಭೇಟಿ ಮಾಡಿದರು. ಗ್ರಾಮಸ್ಥರ ಮನವಿಯ ಮೇರೆಗೆ ಅಲ್ಲಿನ ಶ್ರೀ ಸೇವಾಲಾಲ ದೇವಸ್ಥಾನ ಜಾಗ ನೋಂದಣಿಯ ಬಗ್ಗೆ ಪರಿಶೀಲಿಸಿ, ನಿರ್ಮಾಣ ಕಾರ್ಯವನ್ನು ಬೇಗನೆ ಪೂರ್ಣಗೊಳಿಸುವಂತೆ ಕ್ರಮ ವಹಿಸಲು ಸೂಚನೆ ನೀಡಿದರು. ಗ್ರಾಮದಲ್ಲಿ ಈಗಾಗಲೇ ಸ್ಥಗಿತಗೊಂಡು ಶಿಥಿಲಾವಸ್ಥೆಯಲ್ಲಿದ್ದ ಸರ್ಕಾರಿ ಕಟ್ಟಡದ ಸ್ಥಳ ವೀಕ್ಷಿಸಿ ಅಲ್ಲಿ ಗ್ರಂಥಾಲಯ ಸೇರಿದಂತೆ ಬೇರೆ ಉದ್ದೇಶಕ್ಕೆ ಆ ಜಾಗ ಬಳಸಲು ಕ್ರಮ ವಹಿಸುವಂತೆ >>4

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


ಹಂಪಿ ಟೈಮ್ಸ್ ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


## ಮೈಕ್ರೋ ನ್ಯೂಸ್

### ಕನ್ನಡಿಗರಿಗೆ ಉದ್ಯೋಗ ಮಿಸಲಾತಿ ತಾತ್ಕಾಲಿಕ ತಡೆ

**ಹಂಪಿ ಟೈಮ್ಸ್ ಬೆಂಗಳೂರು**

ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಸಂಪುಟ ಅನುಮೋದನೆ ನೀಡಲಾಗಿದ್ದ ವಿಧೇಯಕವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.
ಮುಂದಿನ ದಿನಗಳಲ್ಲಿ ಈ ಬಗ್ಗೆ ಮತ್ತೊಮ್ಮೆ ಪರಾಮರ್ಶಿಸಿ ನಿರ್ಧರಿಸಲಾಗುವುದು.ಮುಂದಿನ ಸಂಪುಟ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

### ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ಸರಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯಲ್ಲಿ 2024ನೇ ಸಾಲಿನಲ್ಲಿ ಪಿ.ಪಿ.ಪಿ. ಐ.ಎಂ.ಸಿ ಕೋಟಾದಡಿಯಲ್ಲಿ ಐ.ಟಿ.ಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.
ಫಿಟ್ಟರ್ 24, ಎಲೆಕ್ಟ್ರಿಷಿಯನ್ 24, ಆರ್‌ಸಿಟಿ 4, ಸಿಓಪಿಎ 4, ಎಂಇವಿ 4, ಸಿಎನ್‌ಸಿ 4, ಐಆರ್‌ಡಿಎಂಟಿ 4 ಸ್ಥಾನಗಳು ಖಾಲಿ ಇದ್ದು, ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಹತ್ತಿರದ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9448173151ಗೆ ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆಯ ಸರಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾಖಲೆ ಸಲ್ಲಿಸದ 19 ಸೌಹಾರ್ದ ಸಹಕಾರಿಗಳ ಸಮಾಪನೆಗೆ ಕ್ರಮ: ಆಕ್ಷೇಪಣೆಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ನೋಂದಣಿಯಾದಾಗಿನಿಂದ ಲೆಕ್ಕಪರಿಶೋದನಾ ವರದಿ, ವಾರ್ಷಿಕ ವರದಿ, ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸದೇ ಇರುವ ಬಗ್ಗೆ ಆಕ್ಷೇಪಣೆ-ತಕರಾರುಗಳು ಬಾರದಿದ್ದಲ್ಲಿ ಅಂತಹ ಸಹಕಾರಿಗಳನ್ನು ಸಮಾಪನೆಗೊಳಿಸಲಾಗುತ್ತದೆ.

ಸೂರವ್ವನಹಳ್ಳಿಯ ಕವಾಡ ಶ್ರೀ ಸಿದ್ದೇಶ್ವರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹೊಸಪೇಟೆ ಟಿ.ಬಿಡ್ಯಾಂನ ತುಂಗಭದ್ರ ಬೋರ್ಡ್ ಆಫೀಸರ್ಸ್ ಸೌಹಾರ್ದ ಗ್ರಾಹಕರ ಸಹಕಾರಿ ನಿ., ಬೈಲತುಂಬರಗುಡ್ಡೆಯ ಕವಾಡ ಜಗಜ್ಯೋತಿ ಬಸವೇಶ್ವರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಜುಟ್ಟಲಿಂಗನಹಟ್ಟಿಯ ಕವಾಡ ಭಾರತಾಂಬೆ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹೊಸಪೇಟೆಯ ಸಸ್ಯಶಾಮಲ ಸೌಹಾರ್ದ ಪತ್ತಿನ ಸಹಕಾರಿ ನಿ., ಶ್ರೀಗುರುಗಾದಿಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ.,, ಹಂಪಿಯ ಹಂಪಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆಯ ರೇಣುಕಾಚಾರ್ಯ ಸೌಹಾರ್ದ ಸಹಕಾರಿ ನಿ., ತಂಬ್ರಹಳ್ಳಿಯ ನಂದಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿಯ ವತ್ಸಲಾಬಾಯಿ ಮಹಿಳಾ ಮೈಕ್ರೋ ಫೈನಾನ್ಸ್ ಸೌಹಾರ್ದ ಸಹಕಾರಿ ನಿ., ಚಿಕ್ಕಕುಂಬಲಕುಂಟೆಯ ಕವಾಡ ಸರ್ವೋದಯ ವಿವಿದೋದ್ದೇಶ ಸಹಕಾರಿ ನಿ., ಕವಾಡ ಕಾಮಧೇನು ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಲೋಕಿಕೆರೆ ಗ್ರಾಮದ ಕವಾಡ್ಸ್ ಪ್ರಗತಿ ಸೌಹಾರ್ದ ವಿವಿದ್ದೋದ್ದೇಶ ಸಹಕಾರ ನಿ., ಕುಲಿಮೆಹಟ್ಟಿಯ ಕವಾಡ ಆದರ್ಶ ಸೌಹಾರ್ದ ವಿವಿದ್ದೋದ್ದೇಶ ಸಹಕಾರ ನಿ., ಪೂಜಾರಹಳ್ಳಿಯ ಕವಾಡ ದಿವ್ಯಜ್ಯೋತಿ ಸೌಹಾರ್ದ ವಿವಿದ್ದೋದ್ದೇಶ ಸಹಕಾರ ನಿ., ಕನ್ನಿಗೋರಯ್ಯನಹಟ್ಟಿಯ ಕವಾಡ ನವಜೀವನ ವಿವಿದ್ದೋದ್ದೇಶ ಸಹಕಾರ ನಿ., ಹಿರೇಕುಂಬಲಕುಂಟೆಯ ಕವಾಡ ವಿಜಯನಗರ ಸೌಹಾರ್ದ ವಿವಿದ್ದೋದ್ದೇಶ ಸಹಕಾರ ನಿ., ಸಾಸಲವಾಡದ ಆದರ್ಶ ಸ್ವಶಕ್ತಿ ಸೌಹಾರ್ದ ಸ್ವಸಹಾಯ ಸಹಕಾರಿ ನಿ., ಬಣವಿನಕಲ್ಲು ಗ್ರಾಮದ ಸಂಮೃದ್ಧಿ ಸ್ವಶಕ್ತಿ ಸೌಹಾರ್ದ ಸಹಕಾರಿ ನಿ. ಸೇರಿ ಒಟ್ಟು 19 ಸೌಹಾರ್ದ ಸಹಕಾರಿ ನಿಯಮಿತಗಳು ಕಳೆದ 5 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ಸ್ಥಗಿತಗೊಂಡಿದ್ದು, ಈ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಪದಾಧಿಕಾರಿಗಳ ವಿವರ ಲಭ್ಯವಾಗುತ್ತಿಲ್ಲ ಹಾಗೂ ಸಹಕಾರಿ ಲೆಕ್ಕ ಪುಸ್ತಕಗಳು ಹಾಗೂ ದಾಖಲೆಗಳು ಲಭ್ಯವಾಗುತ್ತಿಲ್ಲ. ಈ ಬಗ್ಗೆ ಆಯಾ ಸಹಕಾರಿಗಳ ಕೇಂದ್ರ ಸ್ಥಾನಗಳಲ್ಲಿ ವಿಚಾರಿಸಲಾಗಿ ಈ ಸಹಕಾರಿಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಕಲಬುರಗಿ ಪ್ರಾಂತ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನೀ., ಇವರು ವರದಿ ಮಾಡಿರುವುದಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನೀ., ಬೆಂಗಳೂರು ಇವರು ಈ ಮೇಲಿನ ಸೌಹಾರ್ದ ಸಹಕಾರಿಗಳನ್ನು ಸಮಾಪನೆಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಹೊಸಪೇಟೆ ಉಪ ವಿಭಾಗದ ಸಹಕಾರಿಗಳ ಸಹಾಯಕ ನಿಬಂಧಕರ ಕಚೇರಿಯ ದಾಖಲೆಗಳ ಪ್ರಕಾರ ಈ ಮೇಲಿನ ಸೌಹಾರ್ದ ಸಹಕಾರಿ ನಿಯಮಿತಗಳು ನೋಂದಣಿಯಾದಾಗಿನಿಂದ ಲೆಕ್ಕಪರಿಶೋದನಾ ವರದಿ, ವಾರ್ಷಿಕ ವರದಿ, ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸದೇ ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರ ಪ್ರಕರಣ 34ರನ್ವಯ ಮಾಹಿತಿಗಳನ್ನು ಸಲ್ಲಿಸದೇ ಇರುವುದರಿಂದ ಈ ಸಹಕಾರಿಗಳ ಅಸ್ಥಿತ್ವವು ಸಂಶಯಾತ್ಮಕವಾಗಿರುತ್ತದೆ. ಆದ್ದರಿಂದ ಈ ಸೌಹಾರ್ದ ಸಹಕಾರಿಗಳನ್ನು ಪ್ರಕರಣ 48ರಡಿ ಸಮಾಪನೆಗೊಳಿಸಬಾರದೇಕೆ ಎಂಬುದಕ್ಕೆ ಈ ಮೇಲಿನ ಎಲ್ಲ ಸಹಕಾರಿಗಳಿಗೆ ಸಂಬಂಧಪಟ್ಟವರು ಈ ನೋಟೀಸಿನ 15 ದಿನಗಳೊಳಗಾಗಿ ಈ ಕಚೇರಿಗೆ ತಮ್ಮ ಆಕ್ಷೇಪಣೆ-ತಕರಾರುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಈ ಸಹಕಾರಿಗಳ ಆಡಳಿತದ ಬಗ್ಗೆ ಯಾರಿಗೂ ಆಸಕ್ತಿ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಸಮಾಪಣೆಗೆ ಕ್ರಮವಿಡಲಾಗುವುದು ಎಂದು ಹೊಸಪೇಟೆ ಉಪವಿಭಾಗದ ಸಹಕಾರಿಗಳ ಸಹಾಯಕ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಟನಾಗು – ಕಾದು ನೋಡು | SCAN & READ E-PAPER

Date: 19-07-2024

SSLC SCIENCE Hampi Times Margadarshi 2024-25

### ಅಧ್ಯಾಯ 1 : ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

( ಮುಂದುವರೆದ ಭಾಗ )

* ಪ್ರತಿವರ್ತಕಗಳು ಪರಸ್ಪರ ಅಯಾನುಗಳನ್ನು ವಿನಿಮಯ ಮಾಡಿಕೊಳ್ಳುವ ಕ್ರಿಯೆಗೆ **ದ್ವಿಸ್ಥಾನಪಲ್ಲಟ ಕ್ರಿಯೆ** ಎನ್ನುವರು.

**ಉದಾ–** $BaCl_2(aq) + Na_2SO_4(aq) \rightarrow BaSO_4(s) + 2NaCl(aq)$
(ಪ್ರಕ್ಷೇಪ)

* ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪವನ್ನು ಉತ್ಪತ್ತಿ ಮಾಡುವ ಕ್ರಿಯೆಗೆ **ಪ್ರಕ್ಷೇಪನ ಕ್ರಿಯೆ** ಎನ್ನುವರು.( ಉದಾ. ಮೇಲಿನ ಸಮೀಕರಣ)

* ಆಕ್ಸಿಜನ್ ಪಡೆದುಕೊಳ್ಳುವ ಅಥವಾ ಹೈಡ್ರೋಜನ್ ಕಳೆದುಕೊಳ್ಳುವ ಕ್ರಿಯೆಗಳಿಗೆ **ಉತ್ಕರ್ಷಣ ಕ್ರಿಯೆಗಳು** ಎನ್ನುವರು.


**ಉದಾ–** $Cu + O_2 \rightarrow CO_2$

* ಆಕ್ಸಿಜನ್ ಕಳೆದುಕೊಳ್ಳುವ ಅಥವಾ ಹೈಡ್ರೋಜನ್ ಪಡೆದುಕೊಳ್ಳುವ ಕ್ರಿಯೆಗಳಿಗೆ **ಅಪಕರ್ಷಣ ಕ್ರಿಯೆಗಳು** ಎನ್ನುವರು.


**ಉದಾ–** $CuO + H_2 \rightarrow Cu + H_2O$

* ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡು ಮತ್ತೊಂದು ಪ್ರತಿವರ್ತಕವು ಅಪಕರ್ಷಣಗೊಂಡರೆ ಅಂತಹ ಕ್ರಿಯೆಗಳನ್ನು **ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಅಥವಾ ರೆಡಾಕ್ಸ್ ಕ್ರಿಯೆಗಳು** ಎನ್ನುವರು.

**ಉದಾ–1.**




**2.**




* ಕೆಲವು ಲೋಹಗಳು ತೇವಾಂಶ , ಗಾಳಿ ಮತ್ತು ಆಮ್ಲಗಳೊಂದಿಗೆ ವರ್ತಿಸಿ ತಮ್ಮ ಹೊಳಪನ್ನು ಕಳೆದುಕೊಳ್ಳುವುದರ ಜೊತೆ ಹಾಳಾಗುತ್ತವೆ. ಈ ಕ್ರಿಯೆಗೆ **ನಶಿಸುವಿಕೆ** ಎನ್ನುವರು.

**ಉದಾ–** ಕಬ್ಬಿಣದ ಮೇಲಿನ ಕೆಂಪು ಮಿಶ್ರಿತ ಕಂದು ಬಣ್ಣದ ಪುಡಿ (ತುಕ್ಕು), ಬೆಳ್ಳಿಯ ಮೇಲಿನ ಕಪ್ಪು ಲೇಪನ ಮತ್ತು ತಾಮ್ರದ ಮೇಲಿನ ಹಸಿರು ಲೇಪನಗಳು.

* ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಗಾಳಿಯೊಂದಿಗೆ ಉತ್ಕರ್ಷಣಗೊಂಡಾಗ ಅವುಗಳ ವಾಸನೆ ಮತ್ತು ರುಚಿ ಬದಲಾಗುತ್ತದೆ. ಇದನ್ನು **ಕಮಟುವಿಕೆ** ಎನ್ನುವರು.

**ಕಮಟುವಿಕೆಯನ್ನು ತಡೆಗಟ್ಟುವ ವಿಧಾನಗಳು :**

* ಆಹಾರ ಪದಾರ್ಥಗಳಿಗೆ ಪ್ರತಿ ಉತ್ಕರ್ಷಕಗಳನ್ನು ಸೇರಿಸುವುದು.

* ಆಹಾರ ಪದಾರ್ಥಗಳನ್ನು ಗಾಳಿ ಪ್ರವೇಶಿಸದ ಸಂಗ್ರಾಹಕಗಳಲ್ಲಿ ಸಂಗ್ರಹಿಸುವುದು.

* ಚಿಪ್ಸ್ ತಯಾರಕರು ಚಿಪ್ಸ್ ಉತ್ಕರ್ಷಣಗೊಳ್ಳುವುದನ್ನು ತಡೆಗಟ್ಟಲು, ಚಿಪ್ಸ್‌ನ ಪೊಟ್ಟಣದಲ್ಲಿ ನೈಟ್ರೋಜನ್ ಅನಿಲವನ್ನು ತುಂಬಿರುತ್ತಾರೆ.

**ನಿಮ್ಮ ಕಲಿಕೆಯನ್ನು ಪರೀಕ್ಷಿಸಿಕೊಳ್ಳಿ:**

**ಸಮೀಕರಣ ಬರೆಯಿರಿ:**

1) ಕ್ಯಾಲ್ಸಿಯಂ ಹೈಡ್ರಾಕ್ಸೈಡ್ + ಕಾರ್ಬನ್ ಡೈ ಆಕ್ಸೈಡ್ → ಕ್ಯಾಲ್ಸಿಯಂ ಕಾರ್ಬೋನೇಟ್ + ನೀರು
2) ಸತು + ಬೆಳ್ಳಿಯ ನೈಟ್ರೇಟ್ → ಸತುವಿನ ನೈಟ್ರೇಟ್ + ಬೆಳ್ಳಿ
3) ಅಲ್ಯೂಮಿನಿಯಂ + ತಾಮ್ರದ ಕ್ಲೋರೈಡ್ → ಅಲ್ಯೂಮಿನಿಯಂ ಕ್ಲೋರೈಡ್ + ತಾಮ್ರ
4) ಬೇರಿಯಂ ಕ್ಲೋರೈಡ್ + ಪೊಟಾಸಿಯಂ ಸಲ್ಫೇಟ್ → ಬೇರಿಯಂ ಕ್ಲೋರೈಡ್ + ತಾಮ್ರ

**ಸಮೀಕರಣ ಸರಿದೂಗಿಸಿ:**

1) $Fe + H_2O \rightarrow Fe_3O_4 + H_2$
2) $HNO_3 + Ca(OH)_2 \rightarrow Ca(NO_3)_2 + H_2O$
3) $NaOH + H_2SO_4 \rightarrow Na_2SO_4 + H_2O$
4) $BaCl_2 + H_2SO_4 \rightarrow BaSO_4 + HCl$

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು: ಶಿವತನಯ ಎಸ್.ಸಿ, ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು. ಹ.ಬೊ.ಹಳ್ಳಿ ತಾ. ವಿಜಯನಗರ ಜಿ


ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ವಿಜ್ಞಾನ

# ಚಂದ್ರನಲ್ಲಿ ಸಸ್ಯಗಳು ಏಕೆ ಬೆಳೆಯುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಚಂದ್ರನು ಭೂಮಿಯ ನೈಸರ್ಗಿಕ ಉಪಗ್ರಹವಾಗಿದೆ. ಭೂಮಿಯ ಉಗಮದೊಂದಿಗೆ ಚಂದ್ರನ ಉಗಮವಾಗಿದ್ದರೂ ಇದುವರೆಗೂ ಚಂದ್ರನಲ್ಲಿ ಸಸ್ಯಗಳು ಬೆಳೆಯಲು ಸಾಧ್ಯವಾಗಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ.

ನಮಗೆಲ್ಲಾ ತಿಳಿದಂತೆ ಸಸ್ಯಗಳು ಬೆಳೆಯಲು ನೀರು, ಮಣ್ಣು, ಸೂರ್ಯನ ಬೆಳಕು ಮತ್ತು ವಾತಾವರಣ ಬೇಕು. ಆದರೆ ಇದರಲ್ಲಿನ ಕೆಲ ಅಂಶಗಳು ಚಂದ್ರನಲ್ಲಿ ಇಲ್ಲ. ಮೊದಲನೆಯದಾಗಿ ಚಂದ್ರನ ಮೇಲ್ಮೈ ಅತ್ಯಂತ ಶುಷ್ಕವಾಗಿದ್ದು, ಸಸ್ಯಗಳು ಮೊಳಕೆಯೊಡೆಯಲು ಬೇಕಾದ ನೀರು ಇಲ್ಲ. ಚಂದ್ರನ ಧ್ರುವಗಳಲ್ಲಿ ಸ್ವಲ್ಪ ಮಂಜುಗಡ್ಡೆ ಇರುವುದು ಪತ್ತೆಯಾಗಿದ್ದರೂ ಇದು ಸಸ್ಯಗಳ ಬೆಳವಣಿಗೆಗೆ ಪೂರಕವಾಗಿಲ್ಲ. ಎರಡನೆಯದಾಗಿ ಚಂದ್ರನ ಮೇಲ್ಮೈಯಲ್ಲಿ ಸಸ್ಯಗಳು ಬೆಳೆಯಲು ಪೂರಕವಾದ ವಾತಾವರಣ ಇಲ್ಲ. ಸಸ್ಯಗಳ ಉಸಿರಾಟಕ್ಕೆ ಅಗತ್ಯವಾದ ಆಮ್ಲಜನಕವಾಗಲೀ, ದ್ಯುತಿಸಂಶ್ಲೇಷಣೆಗೆ ಅಗತ್ಯವಾದ



ಇಂಗಾಲದ ಡೈ ಆಕ್ಸೈಡ್ ಆಗಲೀ ಇಲ್ಲ. ಅಲ್ಲದೇ ಚಂದ್ರನ ವಾತಾವರಣವು ಸಸ್ಯಗಳ ಬೆಳವಣಿಗೆಗೆ ವಿರುದ್ಧವಾಗಿದೆ. ಸೂರ್ಯನ ಕಾಸ್ಮಿಕ್ ವಿಕಿರಣಗಳಿಂದ ಸಸ್ಯಗಳನ್ನು ರಕ್ಷಿಸಲು ಓಜೋನ್ ಪದರವಿಲ್ಲ.

ಸಸ್ಯಗಳ ಬೆಳವಣಿಗೆಯನ್ನು ಪೋಷಿಸುವ ಪೋಷಕಾಂಶಗಳು ಅಲ್ಲಿನ ಮಣ್ಣಿನಲ್ಲಿ ಇಲ್ಲ. ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಸಾರಜನಕ, ರಂಜಕ ಮತ್ತು ಪೊಟ್ಯಾಸಿಯಂನಂತಹ ಪೋಷಕಾಂಶಗಳು ಅಲ್ಲಿನ ಮಣ್ಣಿನಲ್ಲಿ ಇಲ್ಲ. ಚಂದ್ರನ ಮೇಲ್ಮೈ ಅಪಘರ್ಷಕ ಧೂಳಿನ ಪದರದಿಂದ ಕೂಡಿದ್ದು, ಅದು ಸಸ್ಯದ ಸೂಕ್ಷ್ಮವಾದ ಬೇರಿನ ವ್ಯವಸ್ಥೆಯನ್ನು ಹಾನಿಗೊಳಿಸುತ್ತದೆ. ಚಂದ್ರನ ಮಣ್ಣು ಬಂಜರಾಗಿದ್ದು, ಅಗತ್ಯವಾದ ಪೋಷಕಾಂಶಗಳನ್ನು ಹೊಂದಿಲ್ಲ.

ಅಲ್ಲದೇ ಚಂದ್ರನ ಮೇಲಿನ ತಾಪಮಾನವು ಸಹ ಸಸ್ಯಗಳ ಬೆಳವಣಿಗೆಗೆ ಪೂರಕವಾಗಿಲ್ಲ. ಚಂದ್ರನ ಮೇಲ್ಮೈ ತಾಪಮಾನವು ಹಗಲಿನಲ್ಲಿ ಅತ್ಯಂತ ಬಿಸಿಯಿಂದ ಹಾಗೂ ರಾತ್ರಿಯಲ್ಲಿ ಅತ್ಯಂತ ಶೀತದಿಂದ ಕೂಡಿರುತ್ತದೆ. ಚಂದ್ರನ ಹಗಲಿನ ತಾಪಮಾನವು 100 ಡಿಗ್ರಿ ಸೆಲ್ಸಿಯಸ್‌ಗೆ ತಲುಪಬಹುದು ಮತ್ತು ರಾತ್ರಿಯ ತಾಪಮಾನವು ಮೈನಸ್ 173 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಬಹುದು. ಈ ಪರಿಸ್ಥಿತಿಯಲ್ಲಿ ಬಹುತೇಕ ಸಸ್ಯ ಪ್ರಭೇದಗಳು ಬದುಕಲು ಸಾಧ್ಯವಿಲ್ಲ. ಚಂದ್ರನಲ್ಲಿ ಸಸ್ಯಗಳು ಬೆಳೆಯಲು ಸೂಕ್ತವಾದ ಮಣ್ಣು, ವಾತಾವರಣ, ನೀರು, ತಾಪಮಾನ ಇಲ್ಲದೇ ಇರುವುದರಿಂದ ಅಲ್ಲಿ ಸಸ್ಯಗಳು ಬೆಳೆಯಲು ಸಾಧ್ಯವಿಲ್ಲ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಸಣ್ಣದಾಗಿ ಆರಂಭ ದೊಡ್ಡದಾಗಿ ಮುಕ್ತಾಯ



ಒಳ್ಳೆಯ ಮನಸ್ಸಿನಿಂದ ಕಾಯಕ ಆರಂಭ ಮಾಡಿದರೆ ಅದು ಅರ್ಧ ಮುಗಿದಂತೆಯೆ ಎಂಬುದು ಅನುಭವದ ಮಾತು. ಆಸಕ್ತಿ, ಉತ್ಸಾಹ ಅಂತರಂಗದಲ್ಲಿ ಸಣ್ಣದಾಗಿ ಉಕ್ಕಿದಾಗ, ಹಿಡಿದಿರುವ ಕೆಲಸ ಮಾಡಬಲ್ಲೆನೆಂಬ ಸಣ್ಣ ಆತ್ಮವಿಶ್ವಾಸ ಮನದಲ್ಲಿ ಗಟ್ಟಿಯಾದಾಗ, ಎಲ್ಲವೂ ಸುಲಭವಾಗಬಲ್ಲವು. ಇದಕ್ಕೆ ನಮ್ಮ ಕಣ್ಣಮುಂದೆ ನಡೆಯುವ ಹಾಗೂ ನಮ್ಮ ಗಮನಕ್ಕೆ ಪ್ರತ್ಯಕ್ಷವಾಗಿ-ಪರೋಕ್ಷವಾಗಿ ಕಂಡುಬರುವ ನೂರಾರು ಘಟನೆಗಳೇ ಸಾಕ್ಷಿ. ಉದಾಹರಣೆಗೆ: ಬೆಳಿಗ್ಗೆ ಸೂರ್ಯ ಸಣ್ಣದಾಗಿ ಉದಯವಾಗುವುದು, ಭೂಮಿಯೊಳಗಿಂದ ಸಣ್ಣ ಬೀಜ ಮೊಳಕೆಯೊಡೆಯುವುದು, ಇರುವೆಗಳು ಸಣ್ಣದಾಗಿ ಮಣ್ಣಿನ ಗೂಡನ್ನು ಕಟ್ಟಲು ಆರಂಭಿಸುವುದು, ಮಗು ಒಂದೊಂದಾಗಿ ಹೆಜ್ಜೆ ಇಡಲು ಮುಂದಾಗುವುದು, ಗಿಡದಲ್ಲಿ ಸಣ್ಣ ಮೊಗ್ಗು ಹೂವಾಗಿ ಅರಳುವುದು, ಮರಿಮಂಗವೊಂದು ಸಣ್ಣದಾಗಿ ಜಿಗಿಯುವುದು ಇತ್ಯಾದಿ... ಇವೆಲ್ಲವೂ ಆದಿಯಲ್ಲಿ ಗುರುತಿಸಲಾಗದಿದ್ದರೂ ಕೆಲವು ಕ್ಷಣ ಅಥವಾ ಕೆಲವು ದಿನಗಳ ನಂತರ ಇವುಗಳ ವಿಸ್ತಾರ ಅಗಾಧವಾಗಿ ನಮಗೆ ಆಶ್ಚರ್ಯವನ್ನುಂಟು ಮಾಡುತ್ತವೆ.

ಕೆಲವೊಮ್ಮೆ ಯಾರೋ ಅಪರಿಚಿತರು ಸಿಕ್ಕಾಗ ನಮ್ಮ ನಡುವೆ ಒಂದು 'ಸಣ್ಣ ನಗುವೇ' ಸ್ನೇಹಕ್ಕೆ ತಿರುಗಿ ಅದು ಮುಂದೆ ಗಟ್ಟಿತನ ಪಡೆದುಕೊಳ್ಳಬಹುದು. ಆರಂಭದಲ್ಲಿ ಉದ್ಯೋಗಕ್ಕೆ ಸೇರಿದಾಗ ಸಣ್ಣ ಸಂಬಳ ಬರಬಹುದು. ದೊಡ್ಡ ಸಂಬಳ ದೊರೆಯಲೆಂದು ಹಾಗೆ ದಿನಗಳನ್ನು ಕಳೆದರೆ? ಸಣ್ಣ ಕೆಲಸವೆಂದು ನಾಳೆಗೆ ಮುಂದೂಡುವುದು ತರವಲ್ಲ. ನಾಳೆಯ ಗರ್ಭದಲ್ಲಿ ಎಂತಹ ವಿಶೇಷ ಅಡಗಿದೆಯೋ ಯಾರು ಬಲ್ಲರು? 'ಹೆಚ್ಚು ಗಳಿಸುವುದು ಸಣ್ಣ ಗಳಿಕೆಯಿಂದಲೇ' ಅಲ್ಲವೆ? ಯಶಸ್ಸು ಗಳಿಸಲು ಯಾವುದೇ ರಾಜಮಾರ್ಗವಿಲ್ಲ. ಆದರೆ ಯಶಸ್ಸಿನ ನಂತರ ಪ್ರತಿಯೊಂದು ರಾಜಮಾರ್ಗ ಎನಿಸುತ್ತದೆ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Hampi Times E-paper
SCAN AND READ

ಜೀವನಕ್ಕೆಉಪಯುಕ್ತವಾದ ವಸ್ತು, ಮಾತು, ಸ್ನೇಹ, ಹಣ ಇತ್ಯಾದಿ ಯಾವುದೇ ಸಣ್ಣದಾಗಿರಬಹುದು. ಅವುಗಳ ಮೌಲ್ಯ ಅತ್ಯಂತವಾಗಿರುತ್ತವೆ. ಸಣ್ಣಬೀಜವೊಂದರಲ್ಲಿ ಅಗಾಧವಾಗಿ ಅಶ್ವಥ ಮರವೊಂದು ಅಡಗಿರುವಂತೆ ಪುಟ್ಟ ಮಕ್ಕಳು ತಮ್ಮ ಮುಗ್ಧತೆಯಿಂದ ದೊಡ್ಡವರ ಮನಸ್ಸನ್ನು ಸಂತೋಷ ಗೊಳಿಸುವ ಶಕ್ತಿ ಪಡೆದಿರುತ್ತವೆ. ಗೋಡೆ ಎಷ್ಟೇ ಬಲಿಷ್ಠವಾಗಿದ್ದರೂ ಅದನ್ನು ಕಟ್ಟುವುದು ಚಿಕ್ಕ ಚಿಕ್ಕ ಇಟ್ಟಿಗೆಗಳಿಂದಲೇ. ವಿಸ್ತಾರವಾದ ಕೊಠಡಿಯೊಳಗಿನ ಕತ್ತಲನ್ನು ನುಂಗುವ ಶಕ್ತಿ ಸಣ್ಣ ದೀಪವೊಂದರಿಂದಲೂ ಸಾಧ್ಯವಾಗುತ್ತದೆ. ಜೀವನವನ್ನೂ ಸಹ ಸಣ್ಣ ಸಣ್ಣ ವಸ್ತುಗಳಿಂದಲೇ ಮಹತ್ತರವಾದ ಬದುಕನ್ನು ನಾವು ಕಟ್ಟಿಕೊಳ್ಳಬೇಕು. ಅವಕಾಶಗಳು ಸಣ್ಣದಾಗಿ ಬರುತ್ತವೆ ಆದರೆ ನಿಲ್ಲುವುದಿಲ್ಲ. ಬಂದ ಸದಾವಕಾಶಗಳನ್ನು ತಕ್ಷಣ ಬಾಚಿಕೊಳ್ಳಬೇಕು. ನಾವು ಒಳ್ಳೆಯ ದಾರಿ ನಮ್ಮ ಮುಂದೆ ಬಂದು ನಿಲ್ಲಲೆಂದು ಕಾಯುತ್ತಿರುತ್ತೇವೆ. ಆದರೆ ನಡೆದಾಡುವುದರಿಂದ ದಾರಿ ನಿರ್ಮಾಣವಾಗುತ್ತದೆ. ಆದ್ದರಿಂದ ಕ್ರಿಯಾಶೀಲರಾಗೋಣ. ಆತ್ಮಗೌರವ ಬೆಳೆಸಿಕೊಳ್ಳದಿದ್ದರೆ ನಾವು ಇತರರ ಕಾಲಡಿ ಬದುಕಬೇಕಾಗುತ್ತದೆ. ಪರಿಸ್ಥಿತಿಗೆ ಹೊಂದಿಕೊಂಡರೆ ಬದುಕುವುದನ್ನು ಕಲಿತಂತೆಯೇ.

ಆಯಾಸವಾದಾಗ ಒಂದು ಸಣ್ಣ ನಿದ್ದೆ, ಮುಳುಗುವವನಿಗೆ ಸಣ್ಣ ಕೊಂಬೆ, ಹಸಿವೆಯಾದಾಗ ಒಂದು ತುತ್ತು ಅನ್ನ, ಓಟದಲ್ಲಿ ಗೆಲ್ಲಬೇಕಾದಾಗ ಸಣ್ಣದಾದ ಒಂದೆರೆಡು ಹೆಜ್ಜೆಗಳು ಇವೆಲ್ಲಾ ನಮಗೆ ಖುಷಿ ಕೊಡುವಂತಹ ವಿಚಾರಗಳೆ. ಸಣ್ಣದೆಂದು ಕಡೆಗಣಿಸುವುದಾಗಲಿ ದೊಡ್ಡದೆಂದು ಅಪ್ಪಿಕೊಳ್ಳುವುದಾಗಲಿ ಸಲ್ಲದು. ಎರಡೂ ಸಂದರ್ಭಾನುಸಾರ ಒಪ್ಪಿತವೆ. ಜನಪದರು ಹೇಳುವಂತೆ: ಹತ್ತು ಕಟ್ಟುವಲ್ಲಿ ಮುತ್ತು ಕಟ್ಟು, ದಾನ ಮಾಡುವಾಗ ಹಿರಿದು ಕಿರಿದೆಂಬ ಭೇದ-ಭಾವ ಮಾಡಕೂಡದು.

ಸರಳತೆಯೆಂಬುದು ಜೀವನದಲ್ಲಿ ಎಷ್ಟು ಮಾರ್ಮಿಕವಾಗಿರುತ್ತದೆಂದರೆ ನಮ್ಮನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತದೆ. ಉದಾಹರಣೆಗೆ ಬುದ್ಧ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧಿ, ಸಿದ್ಧೇಶ್ವರಸ್ವಾಮಿ ಮುಂತಾದವರನ್ನು ಹೆಸರಿಸಬಹುದು.

## ಹಂಪಿ ಅಭಿವೃದ್ಧಿಗೆ ಪ್ರವಾಸಿಗರ ನಿರಿಕ್ಷೇಗಳು

# ಮತ್ತಷ್ಟು ಬೆರಗು ನೀಡಲಿ ನಮ್ಮ ಹಂಪಿ

■ ಯು ಎಚ್ ಎಮ್ ಗಾಯಿತ್ರಿ ಬಳ್ಳಾರಿ


ಹಂಪಿ ಪ್ರವಾಸ ಎಂದರೆ ಎಲ್ಲರಿಗೂ ಅದೇನೋ ಮಂದಹಾಸ ತರುವ ಸಂಗತಿ ಇತ್ತೀಚೆಗೆ ತಾನೇ ನಾನು ನನ್ನ ಕುಟುಂಬದೊಂದಿಗೆ ಹಂಪಿ ನೋಡಲು ಹೋಗಿದೆ.

ಆಗಿನ ಹಂಪಿ ನೋಡಲು ಪ್ರಸ್ತುತ ಹಂಪಿ ನೋಡಲು ಬಹಳಷ್ಟು ಬೇಸರವಾಗುತ್ತೆ ವಿಜಯ ನಗರ ಅರಸರ ರಾಜಧಾನಿಯಾಗಿದ್ದ ಈ ನಗರ ಈಗ ನಾಶಗೊಳಿಸಲ್ಪಟ್ಟ ಅವಶೇಷಗಳ ಒಂದು ಪಟ್ಟಣವಾಗಿ ಉಳಿದಿದೆ.

ಅಲ್ಲಿನ ಪ್ರಸಿದ್ಧ ವಿಜಯ ನಗರ ರಾಜಮನೆತನ, ಕಲ್ಲಿನಲ್ಲಿ ದೇವಾಲಯಗಳು, ಕಲಾ ಕುಸುರಿಯಿಂದಲೇ ಕಣ್ಮನ ಸೆಳೆಯುವ ಗೋಪುರಗಳು, ವಿಶಾಲ ರಸ್ತೆಗಳು. ಇಷ್ಟೆಲ್ಲ ವಿಶ್ವ ವಿಖ್ಯಾತವಾಗಿರುವ ಹಂಪಿಯ ಬಗ್ಗೆ ಇನ್ನು ಹೊರ ಜಗತ್ತಿಗೆ ಅಷ್ಟಾಗಿ ತಿಳಿದಿಲ್ಲ ಅದು ಇನ್ನಷ್ಟು ಮಾಹಿತಿ ತಲುಪಬೇಕು

ಮತ್ತೊಂದು ಕಡೆ ಹಾಳು ಹಂಪಿ ಎಂದೆನಿಸಿಕೊಂಡ ಈ ಹಂಪಿ ನಶಿಸಿ ಹೋಗುತ್ತಿರುವುದನ್ನು ನೋಡಬಹುದು ಅಲ್ಲಿನ ಸ್ಮಾರಕಗಳು ಗೋಪುರಗಳು ಬಿರುಕುವುದನ್ನು ಕಾಣಬಹುದು. ಇನ್ನೊಂದು ಹೇಳುವುದಾದರೆ ಆಗಿನ ಹಂಪಿಯ ಸ್ಮಾರಕಗಳನ್ನು ಮುಟ್ಟಿ ಆನಂದಿಸುತ್ತಿದೆವು ಆದರೆ ಈಗಿನ ಪರಿಸ್ಥಿತಿ ಹಂಪಿ ಸೌಂದರ್ಯ ದೂರದಿಂದ ನೋಡಿ ಕಣ್ಣ್ ತುಂಬಿಸಿಕೊಳ್ಳುವ ಸಂದರ್ಭ ಒದಗಿದೆ ನಮ್ಮ ಮುಂದಿನ ಪೀಳಿಗೆಯಲ್ಲಿ ಚಿತ್ರಗಳಲ್ಲಿ ಹಂಪಿ ವೈಭವ ನೋಡುವ ಸಂದರ್ಭ ಬಂದರು ಬರಬಹುದು ಎನ್ನುವ ಆತಂಕ ಪ್ರವಾಸಿಗರಲ್ಲಿ ಮೂಡಿದೆ. ನಮ್ಮ ಹಂಪಿ ನಮ್ಮ ಹೆಮ್ಮೆ ಎನ್ನುವ ಹಾಗೇ ಸರಕಾರ ಹಾಳು ಹಂಪೆಯನ್ನು ಉಳಿಸಬೇಕೆಂದು ನಮ್ಮೆಲ್ಲರ ಆಶೆಯವಾಗಿದೆ.

ಓದುಗರ ಓಲೆ



# ಕರ್ನಾಟಕ ಪತ್ರಕರ್ತ ಸಂಘದಿಂದ ಅನಾಥ, ಹಿರಿಯ ಚೇತನರಿಗೆ ಸನ್ಮಾನ



■ ಹಂಪಿ ಟೈಮ್ಸ್ ಕೂಡ್ಲಿಗಿ

ಪತ್ರಿಕರ್ತರು ಸಾಮಾಜಿಕ ಬದಲಾವಣೆಯ ತುಡಿತ ಜೊತಗೆ ಪ್ರತಿಯೊಬ್ಬರಲ್ಲೂ ಚೈತನ್ಯ ತುಂಬುವ ವರದಿಗಳನ್ನು ಮಾಡುವತ್ತ ಹೆಚ್ಚು ಗಮನಹರಿಸಬೇಕು ಎಂದು ಹಿರಿಯ ಪತ್ರಕರ್ತ ಸಿದ್ದರಾಮ ಹಿರೇಮಠ ಹೇಳಿದರು.

ಕರ್ನಾಟಕ ಪತ್ರಕರ್ತರ ಸಂಘ ಕೂಡ್ಲಿಗಿ ಘಟಕದಿಂದ ಪಟ್ಟಣದ ಜ್ಞಾನ ಭಾರತಿ ಶಾಲೆಯ ಸಭಾಂಗಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಹಮ್ಮಿಕೊಂಡಿದ್ದ ಅನಾಥ ವೃದ್ಧರಿಗೆ, ಹಿರಿಯ ನಿವೃತ್ತ ನೌಕರರಿಗೆ, ವಿಶೇಷ ಚೇತನರಿಗೆ ಹಾಗೂ ವಿಕಲ ಚೇತನರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ವೃದ್ಧಾಶ್ರಮದ ಎಲ್ಲಾ ಹಿರಿಯ ಫಲಾನುಭವಿಗಳಿಗೆ ಹೊಚ್ಚ ಹೊಸ ಉಡುಪು, ಫಲ ಹಾಗೂ ಅಗತ್ಯ ನಿತ್ಯೋಪಯೋಗಿ ಸಾಮಾಗ್ರಿಗಳನ್ನು ವಿತರಿಸಲಾಯಿತು. ನಿವೃತ್ತ ಹಿರಿಯ ನೌಕರರಿಗೆ ಹಾಗೂ ಕಲಾವಿದರಿಗೆ ವಿಶೇಷ ಚೇತನರಿಗೆ, ಕಾರ್ಯಕ್ರಮದ ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಯುವಮುಖಂಡ ಗುಳಿಗೆ ವೀರೇಂದ್ರ, ರೈತ ಸಂಘದ ಮುಖಂಡ ಮಹೇಶ್, ಪಿಎಸ್ಐ ಪ್ರಕಾಶ್, ಕರ್ನಾಟಕದ ಪತ್ರಕರ್ತರ ಸಂಘದ ಕಾರ್ಯದರ್ಶಿ ಕೆ ಗೋಪಾಲ್, ಜಿಲ್ಲಾ ಗೌರವಾಧ್ಯಕ್ಷ ಕೆಎಸ್ ಮುರುಳಿಧರ್, ವಿಜಯನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಕುಬಾಳು ಪ್ರಕಾಶ್, ಪತ್ರಕರ್ತೆ ವಿಜಯವಾಣಿ, ಉಪನ್ಯಾಸಕ ಆಸಿಫ್, ಶಿಕ್ಷಕಿ ಲಕ್ಷ್ಮಿ ದೇವಿ, ಮಾಜಿ ಸೈನಿಕ ನೌಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಎಂಎಲ್ಎ ಆಪ್ತ ಸಹಾಯಕ ಸಿದ್ದಣ್ಣ, ತಾಲೂಕಧ್ಯಕ್ಷ ವೀರಯ್ಯ, ಕರ್ನಾಟಕ ಪತ್ರಕರ್ತರ ಸಂಘದ ತಾಲೂಕ ಅಧ್ಯಕ್ಷ ಸಾಲುಮನೆ ರಾಘವೇಂದ್ರ, ಗೌರವಧ್ಯಕ್ಷ ಮಿನುಕೆರೆ ತಿಪ್ಪೇಸ್ವಾಮಿ, ಪ್ರಧಾನ ಕಾರ್ಯದರ್ಶಿ ಗುನ್ನಳ್ಳಿ ಶ್ರೀಧರ, ಸಂಘದ ಸದಸ್ಯರು ಇತರರು ಉಪಸ್ಥಿತರಿದ್ದರು.

## ಬಳ್ಳಾರಿ ಜೆಎಸ್‌ಡಬ್ಲ್ಯೂ ವಿದ್ಯಾನಗರ ಕ್ಯಾಂಪಸ್‌ನಲ್ಲಿ ಎಡುಕಾನ್-2024 ಶಿಕ್ಷಣ ಸಮಾವೇಶ

# ಹೆಸರು ನೋಂದಣಿಗೆ ಜು.22 ಕೊನೆಯ ದಿನ

■ ಹಂಪಿ ಟೈಮ್ಸ್ ಬಳ್ಳಾರಿ

ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಜೆಎಸ್‌ಡಬ್ಲ್ಯೂ ಫೌಂಡೇಶನ್ ಆಯೋಜಿಸುತ್ತಿರುವ ಎಡುಕಾನ್-2024, ಕೈಜೋಡಿಸಿ ಕಲಿಸೋಣ' ಎಂಬ ವಿಷಯದೊಂದಿಗೆ ಎಡುಕಾನ್-2024' ಶಿಕ್ಷಣ ಸಮಾವೇಶವನ್ನು 2024ರ ಆಗಸ್ಟ್ 1 ಹಾಗೂ 2 ರಂದು ಎರಡು ದಿನಗಳ ಕಾಲ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಜೆಎಸ್‌ಡಬ್ಲ್ಯೂನ ಜೆ-ಮ್ಯಾಕ್ಸ್ ವಿದ್ಯಾನಗರ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ ಎಂದು ಕಲಬುರಗಿ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಡಾ.ಆಕಾಶ ಎಸ್ ಅವರು ತಿಳಿಸಿದ್ದಾರೆ.

ಸಮಾವೇಶದಲ್ಲಿ ಭಾಗವಹಿಸಲಿಚ್ಛಿಸುವರು ಶಿಕ್ಷಣ ಭಾಗಿದಾರರು (knowledge partners/NGOs) ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿಯ https://cpikalaburgi.karnataka.gov.in ವೆಬ್‌ಸೈಟ್‌ನಲ್ಲಿ ಜುಲೈ 22 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಕಾರ್ಯಕ್ರಮದ ವಿವರವಾದ ವೇಳಾಪಟ್ಟಿಯನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿಯೇ ನಂತರ ತಿಳಿಯಬಹುದಾಗಿದೆ.

ಕಲ್ಯಾಣ ಕನಾಟದ ವಿಭಾಗದ ಶಿಕ್ಷಣ ಕ್ಷೇತ್ರದಲ್ಲಿ ಗುಣಾತ್ಮಕತೆಯನ್ನು ತರುವ ಉದ್ದೇಶದಿಂದ ಆಗಸ್ಟ್ 1 ಹಾಗೂ 2 ರಂದು ಎರಡು ದಿನಗಳ ಕಾಲ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನೋಡಲ್ ವ್ಯಕ್ತಿಗಳಾದ ಬಳ್ಳಾರಿ ತೋರಣಗಲ್ಲು ಜೆಎಸ್‌ಡಬ್ಲ್ಯೂ ಫೌಂಡೇಶನ್‌ನ ಸಿಎಸ್ಆರ್ ಹಿರಿಯ ವ್ಯವಸ್ಥಾಪಕರಾದ ರಾಜಶೇಖರ ರಾಜು ಇವರ ಮೊ.9989833133 ಹಾಗೂ ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಚನ್ನಬಸಪ್ಪ ಮುಧೋಳ ಇವರ ಮೊ.8310259380 ಗೆ ಸಂಪರ್ಕಿಸಲು ಕೋರಲಾಗಿದೆ.



## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**19–07–2024 – ಶುಕ್ರವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೂಲ |
| ಯೋಗ | : ಇಂದ್ರ |
| ಕರಣ | : ಕೌಳವ |
| ಸೂರ್ಯೋದಯ | : 05:53:15 |
| ಸೂರ್ಯಾಸ್ತ | : 19:13:08 |
| ರಾಹು | : 10:53–12:33 |
| ಯಮಘಂಡ | : 15:53–17:33 |
| ಗುಳಿಕ | : 07:33–09:13 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 18–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.31 ಅಡಿ |
| ಒಳ ಹರಿವು | 82491 ಕ್ಯುಸೆಕ್ |
| ಹೊರ ಹರಿವು | 300 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 46.802 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.90 ಅಡಿ |
| ಒಳ ಹರಿವು | 11425 ಕ್ಯುಸೆಕ್ |
| ಹೊರ ಹರಿವು | 262 ಕ್ಯುಸೆಕ್ |
| ಸಾಮರ್ಥ್ಯ | 10.947 ಟಿಎಂಸಿ |

# ಕೃಷಿ ಅವಶೇಷಗಳ ಬಳಕೆ ಕಾರ್ಯಾಗಾರ

## ಜೈವಿಕ ದ್ರವ್ಯರಾಶಿಯ ಬಳಕೆ, ಥರ್ಮಲ್ ಪವರ್ ಪ್ಲಾಂಟ್‌ಗಳಲ್ಲಿ ಬಯೋಮಾಸ್ ಬಳಕೆ

■ ಹಂಪಿ ಟೈಮ್ಸ್ ಬಳ್ಳಾರಿ

ತಾಲ್ಲೂಕಿನ ಹಗರಿಯ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಮಿಷನ್ ಸಮರ್ಥ ಮಿಷನ್ ಅಡಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಜೈವಿಕ ದ್ರವ್ಯರಾಶಿಯ ಬಳಕೆ, ಥರ್ಮಲ್ ಪವರ್ ಪ್ಲಾಂಟ್‌ಗಳಲ್ಲಿ ಬಯೋಮಾಸ್ ಬಳಕೆಯ ಕುರಿತು ರೈತರಿಗೆ ಒಂದು ದಿನದ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಯಿತು.



ಮಿಷನ್ ನಿರ್ದೇಶಕ ಸತೀಶ್ ಉಪಾಧ್ಯಾಯ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ಅನ್ವಯಿಕೆಗಳಲ್ಲಿ ಕೃಷಿ ಅವಶೇಷಗಳ ಬಳಕೆಯನ್ನು ಉತ್ತೇಜಿಸುವುದು ಮತ್ತು ಸುಗಮಗೊಳಿಸುವುದು, ಜೈವಿಕ ದ್ರವ್ಯರಾಶಿಯ ಒಟ್ಟುಗೂಡಿಸುವಿಕೆ, ಸಾಗಣೆ, ಉತ್ಪಾದನೆ, ಪೂರೈಕೆ ಮತ್ತು ಸಹ–ಫೈರಿಂಗ್‌ಗಾಗಿ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಅನುವು ಮಾಡಿಕೊಡುತ್ತದೆ ಎಂದು ಹೇಳಿದರು.


ಬೆಳೆ ಅವಶೇಷಗಳ ನಿರ್ವಹಣೆಗೆ ರಾಷ್ಟ್ರೀಯ ನೀತಿ, ಕೃಷಿ ಯಾಂತ್ರೀಕರಣಕ್ಕೆ ಕೇಂದ್ರ ಯೋಜನೆ, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಸಹ–ಫೈರಿಂಗ್ ಮೂಲಕ ವಿದ್ಯುತ್ ಉತ್ಪಾದನೆಗೆ ಬಯೋಮಾಸ್ ಬಳಕೆಯ ನೀತಿ ಮತ್ತು ಕೃಷಿ ಕ್ಷೇತ್ರವು ಹೇಗೆ ಮುಂದೆ ಬರಬಹುದು ಮತ್ತು ಕೊಡುಗೆ ನೀಡಬಹುದು ಎಂದರು.

ಬಳಿಕ ವಾಯು ಮಾಲಿನ್ಯದ ಜ್ವಲಂತ ಸಮಸ್ಯೆಯ ಬಗ್ಗೆ ಮಾತನಾಡಿದರು. ಜೀವರಾಶಿಯ ವಿವಿಧ ಸಂಭಾವ್ಯ ಉಪಯೋಗಗಳ ಬಗ್ಗೆ ವಿವರಿಸಿದರು. ಫರೀದಾಬಾದ್‌ನ ಎನ್‌ಪಿಟಿಐ ಮಹಾ ನಿರ್ದೇಶಕ ಡಾ.ತೃಪ್ತಾ ಠಾಕೂರ್ ಅವರು ಮಾತನಾಡಿ, ಕೃಷಿ–ಅವಶೇಷಗಳ ಉದ್ದೇಶ ಪೂರ್ವಕ ಬಳಕೆ ಮತ್ತು ಗಳಿಕೆಯ ಸಾಮರ್ಥ್ಯವನ್ನು ಹಂಚಿಕೊಳ್ಳಲು ಆದರ್ಶ ವೇದಿಕೆಯನ್ನು ಒದಗಿಸಿದ್ದು, ರೈತರು ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಫರೀದಾಬಾದ್‌ನ ಎನ್‌ಪಿಟಿಐ ಪ್ರಧಾನ ನಿರ್ದೇಶಕ ಡಾ.ಮಂಜು ಮಾಮ್, ಮಿಷನ್ ಸದಸ್ಯರಾದ ಪ್ರಫುಲ್ ಚಂದ್ರ ಡೋಂಗ್ರೆ, ಸಮರ್ಥ, ಹಗರಿಯ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಜಿ.ರವಿಶಂಕರ್, ಡಾ.ಎಂ.ಗೋವಿಂದಪ್ಪ, ಎನ್‌ಪಿಟಿಐ ನಿರ್ದೇಶಕ ಸಂಜಯ ಪಾಟೀಲ್ ಸೇರಿದಂತೆ ಸುಮಾರು 250ಕ್ಕೂ ಹೆಚ್ಚು ರೈತರು ಉಪಸ್ಥಿತರಿದ್ದರು.

# ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ: ಡಿಸಿ

■ ಹಂಪಿ ಟೈಮ್ಸ್ ಬಳ್ಳಾರಿ



ನಗರದ 03 ಪರೀಕ್ಷಾ ಕೇಂದ್ರಗಳಲ್ಲಿ ಜು.20 ರಂದು ಮಧ್ಯಾಹ್ನ 02 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಸಂಸ್ಥೆಯಲ್ಲಿನ ನೇಮಕಾತಿಗಳಿಗೆ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಆವರಣವನ್ನು ದಂಡ ಪ್ರಕ್ರಿಯಾ ಸಂಹಿತೆ 1973 ರ ಕಲಂ 144 ರನ್ವಯ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್, ಇಂಟರ್‌ನೆಟ್ ಸೆಂಟರ್‌ಗಳು ಕಾರ್ಯನಿರ್ವಹಿಸದಂತೆ ಮುಚ್ಚಲು ಆದೇಶಿಸಿದ್ದು, ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ.

ಈ ಆದೇಶವು ಡಿಪ್ಲೋಮಾ ಪ್ರವೇಶ ಪರೀಕ್ಷಾ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

# ಮನೆ ಒಳಗಡೆ ಈಡಿಸ್ ಸೊಳ್ಳೆ ಉತ್ಪತ್ತಿಯಾಗದಂತೆ ನಿಗಾವಹಿಸಿ

■ ಹಂಪಿ ಟೈಮ್ಸ್ ಬಳ್ಳಾರಿ



ಈಡಿಸ್ ಸೊಳ್ಳೆ ಉತ್ಪತ್ತಿಯಾಗುವ ಮನೆ ಒಳಗಿನ ಫ್ರಿಜ್, ಎರ್‌ಕೂಲರ್, ಅಲಂಕೃತ ಗಿಡಗಳ ಕುಂಡಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ಡೆಂಗ್ಯು ಹರಡದಂತೆ ಎಚ್ಚರವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಈಡಿಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ಡೆಂಗ್ಯು ರೋಗಕ್ಕೆ ನಿರ್ದಿಷ್ಟ ಚಿಕಿತ್ಸೆ ಇಲ್ಲವಾದರೂ ಸಹ ಲಕ್ಷಣಗಳಾಧರಿಸಿ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇದರ ಹೊರತಾಗಿ ಸಾರ್ವಜನಿಕರು ಮನೆಯ ಒಳಗೆ ಸೊಳ್ಳೆ ಉತ್ಪತ್ತಿಯಾಗುವಂತಹ ಫ್ರಿಜ್‌ನ ಹಿಂಭಾಗ, ಅಲಂಕೃತವಾಗಿ ಬಳಸುವ ಮನಿಪ್ಲಾಂಟ್ ಕುಂಡಗಳು (ಬಾಟಲ್), ಸ್ನಾನಗೃಹದಲ್ಲಿ ಮುಚ್ಚಳ ಮುಚ್ಚಲು ಸಾಧ್ಯವಿಲ್ಲದ ಸಿಮೆಂಟ್ ತೊಟ್ಟಿಗಳಲ್ಲಿ ವಾರಕ್ಕೊಮ್ಮೆ ನೀರು ಖಾಲಿ ಮಾಡಬೇಕು ಎಂದು ಹೇಳಿದ್ದಾರೆ.

ಶಿಕ್ಷಕರು ಶಾಲೆ, ಅಂಗನವಾಡಿಗಳಲ್ಲಿ ಪ್ರಾರ್ಥನೆ ವೇಳೆ ಮಕ್ಕಳಿಗೆ ತಮ್ಮ ಮನೆಯಲ್ಲಿ ನೀರು ಸಂಗ್ರಹಾರಕಗಳನ್ನು ವಾರಕ್ಕೊಮ್ಮೆ ಸ್ವಚ್ಚಗೊಳಿಸಿ ನೀರು ತುಂಬಿದ ನಂತರ ಮುಚ್ಚಳ ಮುಚ್ಚುವಂತೆ ಪಾಲಕರ ಮನವೊಲಿಸಲು ತಿಳಿಸಬೇಕು. ಲಾರ್ವಾ ಪತ್ತೆ ಹಚ್ಚಿ ಮಾಹಿತಿ ತಿಳಿಸಿದ ವಿದ್ಯಾರ್ಥಿಗಳಿಗೆ ಎಲ್ಲರ ಸಮ್ಮುಖದಲ್ಲಿ ಪ್ರಶಂಸಿಸಬೇಕು ಎಂದು ಅವರು ಕೋರಿದ್ದಾರೆ.

ವಾರದಲ್ಲಿ ಒಂದು ದಿನ ಶುಕ್ರವಾರದಂದು ಡೆಂಗ್ಯು ರೋಗ ಹರಡುವ ಈಡಿಸ್ ಸೊಳ್ಳೆ ನಿರ್ಮೂಲನಾ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಬೆಂಬಲದೊಂದಿಗೆ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿಗಳ ಸಮನ್ವಯದೊಂದಿಗೆ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಗ್ರಾಮ, ವಾರ್ಡ್‌ಗಳಿಗೆ ಸಿಬ್ಬಂದಿಯವರೊಂದಿಗೆ ಭೇಟಿ ನೀಡಿದಾದ ಸಾರ್ವಜನಿಕರು ಸಹಕರಿಸಬೇಕು ಎಂದು ತಿಳಿಸಿದ್ದಾರೆ.

# ರೈತರು ಜಾರಿ ಬೀಳುವ ಮುನ್ನ ರಸ್ತೆ ಗುಂಡಿಗಳಿಗೆ ಗ್ರಾವೆಲ್ ಹಾಕಿಸಿ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಬುಕ್ಕಸಾಗರ ಗ್ರಾಮದ ನಾಗಪ್ಪ ಗುಡಿಯಿಂದ ಕಟ್ಟೆಗೌಡರ ಪಣವಿಗೆ ಒಂದು ಕಿಲೋಮೀಟರ್ ಉದ್ದದ ರಸ್ತೆ ತಗ್ಗು ಗಂಡಿಗಳಿಂದ ಕೆಸರು ಗದ್ದೆಯಂತಾಗಿದೆ. ಕೃಷಿ ಚಟುವಟಿಕೆಗಳಿಗೆ ತೆರಳುವ ರೈತರು, ವಾಹನಗಳು ಆಯಾತಪ್ಪುತ್ತಿದ್ದಾರೆ. ಸಂಬಂಧಿಸಿದ ನೀರಾವರಿ ಅಧಿಕಾರಿಗಳು ರಸ್ತೆಗೆ ಗ್ರಾವೆಲ್ ಹಾಕಿಸಿ ರೈತರ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಕರ್ನಾಟಕ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆ ರೈತಮುಖಂಡ ಎಸ್. ರುದ್ರಪ್ಪ ಆಗ್ರಹಿಸಿದ್ದಾರೆ.

ಸುರಿವ ಅಲ್ಪ ಮಳೆಗೆ ಹೊಲಗದ್ದೆಗಳಿಗೆ ತೆರಳುವ ರಸ್ತೆಗಳು ಕೆಸರುಮಯವಾಗಿವೆ. ಸೈಕಲ್ ತುಳಿದುಕೊಂಡು ಹೋಗದಂತಾಗಿದೆ. ರೈತರ ಗೋಳು ಕೇಳೋರು ಯಾರು ಎನ್ನುವಂತಾಗಿದೆ. ರೈತರು ಜಾರಿ ಬಿದ್ದು ಮೂಲೆಗುಂಪಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆವಹಿಸಿ ರೈತರ ಸಂಕಷ್ಟಗಳನ್ನು ರೈತರು ಕೇಳುವ ಮುನ್ನವೇ ಅರಿತು ರೈತರಿಗೆ, ವಾಹನ ಸವಾರರಿಗೆ ಅನುಕೂಲವಾಗುವಂತೆ ಕೆಲಸ ಮಾಡಬೇಕೆಂದು ಆಗ್ರಹಿಸಿದ್ದಾರೆ.





## ಹೊಸಪೇಟೆ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಪ್ರವೇಶ ಆರಂಭ

ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆಯ ಸರಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯಲ್ಲಿ 2024ನೇ ಸಾಲಿನಲ್ಲಿ ಖಾಲಿ ಇರುವ ಸಿಓಪಿಎ–15, ಆರ್‌ಎಸಿಟಿ–11, ಎಂಇವಿ–10, ಸಿಎಸ್‌ಸಿ–18 ಮತ್ತು ಐಆರ್‌ಡಿಎಂಟಿ–6 ಸ್ಥಾನಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳು ಆಗಸ್ಟ್ 31 ರೊಳಗೆ ಆಫ್‌ಲೈನ್ ಮೂಲಕ ಇಲಾಖೆಯ ವೆಬ್‌ಸೈಟ್ www.cite.karnataka.gov.in ಮೂಲಕ ಸ್ವತ: ಅಥವಾ ಹೊಸಪೇಟೆ ಜಂಬುನಾಥ ಹಳ್ಳಿ ರಸ್ತೆಯಲ್ಲಿರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಹೆಲ್ಪ್‌ಡೆಸ್ಕ್ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಹತ್ತಿರದ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು ಸಂಪರ್ಕಿಸಬಹುದು ಎಂದು ಹೊಸಪೇಟೆಯ ಸರಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೆರಿಟ್ ಆಧಾರದಲ್ಲಿ ಪ್ರಕ್ರಿಯೆ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9448173151ಗೆ ಸಂಪರ್ಕಿಸಿ.

# ಗರ್ಭಗುಡಿ ಗ್ರಾಮದಲ್ಲಿ ಪೆಟ್ರೋಲಿಯಂ ರಿಟೈಲ್ ಔಟ್‌ಲೆಟ್ ಸ್ಥಾಪನೆ

■ ಹಂಪಿ ಟೈಮ್ಸ್ ಹೊಸಪೇಟೆ

ಮಂಗಳೂರಿನ ನಯರ್ ಎನರ್ಜಿ ಲಿಮಿಟೆಡ್‌ನ ಡಿವಿಸಿನಲ್ ಮ್ಯಾನೇಜರ್ ಇವರು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ತೆಲಗಿ ಹೋಬಳಿಯ ಗರ್ಭಗುಡಿ ಗ್ರಾಮದ ಸರ್ವೆ ನಂಬರ್ 55/5ರಲ್ಲಿ ಪೆಟ್ರೋಲಿಯಂ ರಿಟೈಲ್ ಔಟಲೇಟ್ ಸ್ಥಾಪನೆ ಮಾಡಲು ನಿರಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಕಂಪನಿಯವರು ಅರ್ಜಿದಾರರಾದ ಹರಪನಹಳ್ಳಿ ತಾಲೂಕಿನ ಹಲವಾಗಲು ಗ್ರಾಮದ ಮೈಲಾರ ರಸ್ತೆಯ ಎಂ.ಬಸವರಾಜಪ್ಪ ತಂದೆ ಎಂ.ಮಲ್ಲಪ್ಪ ಇವರನ್ನು ಫ್ರಾಂಚೈಸ್ಸಿಯನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ. ಪ್ರಯುಕ್ತ ಗರ್ಭಗುಡಿ ಗ್ರಾಮದ ಸರ್ವೆ ನಂಬರ್ 55/5 ರಲ್ಲಿ ಪೆಟ್ರೋಲಿಯಂ ರಿಟೈಲ್ ಔಟಲೇಟ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಕುರಿತಂತೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ ಹತ್ತು ದಿನದೊಳಗಾಗಿ ಆಕ್ಷೇಪಣೆಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ ಹೊಸಪೇಟೆ ವಿಜಯನಗರ ಜಿಲ್ಲೆಯ ಇ–ಮೇಲ್ ಐಡಿ vijayanagaradc@gmail.com ಗೆ ಅಥವಾ ನೇರವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಎಂಎಜಿ–2 ಶಾಖೆಗೆ ಸಲ್ಲಿಸಲು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಅನಧಿಕೃತ ಕೋಚಿಂಗ್ ಸೆಂಟರ್‌ಗಳ ವಿರುದ್ಧ ಕ್ರಮ ಜರುಗಲಿ: ಸದಸ್ಯರ ಸೂಚನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ನಗರದಲ್ಲಿ ಕೆಲವು ಅನಧಿಕೃತ ಕೋಚಿಂಗ್ ಸೆಂಟರ್‌ಗಳು ನವೋದಯ, ಮೊರಾರ್ಜಿ ದೇಸಾಯಿ ಶಾಲೆ, ಅದರ್ಶ ವಿದ್ಯಾಲಯ, ಕಿತ್ತೂರು ರಾಣಿ ಚೆನ್ನಮ್ಮ, ಸೈನಿಕ ಶಾಲೆ ಹಾಗೂ ಇತರೆ ವಸತಿ ಶಾಲೆಗಳ ಪ್ರವೇಶಕ್ಕೆ ವಿಶೇಷ ತರಬೇತಿ ನೀಡುವುದಾಗಿ ಪ್ರಚುರಪಡಿಸಿ, ಮಕ್ಕಳನ್ನು ಸೆಳೆದು, ಅತೀ ಹೆಚ್ಚು ಶುಲ್ಕವನ್ನು ಪಡೆಯುತ್ತಿರುವ ಬಗ್ಗೆ ಹಾಗೂ ಕೋಚಿಂಗ್ ಸೆಂಟರ್‌ಗಳು ಯಾವುದೇ ಇಲಾಖೆಯಲ್ಲಿ ನೋಂದಣಿ ಪಡೆಯದೇ ಮಕ್ಕಳಿಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸದೆ, ಅಕ್ರಮವಾಗಿ ನಡೆಯುತ್ತಿವೆ. ಅಲ್ಲದೇ ಕೋಚಿಂಗ್ ಸೆಂಟರ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಹಾರಾತಿಯು ಬೇರೆ ಸರಕಾರಿ/ ಖಾಸಗಿ ಶಾಲೆಯಲ್ಲಿರುತ್ತದೆ. ಈ ರೀತಿಯಲ್ಲಿರುವ ಸಂಸ್ಥೆಗಳ ವಿರುದ್ಧ ಶಿಕ್ಷಣ ಇಲಾಖೆಯು ಯಾವುದೇ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದೆ. ಈ ಅನಧಿಕೃತ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸುವಂತೆ ವಿವಿಧ ಸಂಘಟನೆಗಳ ಪ್ರಮುಖರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ.ರಾಮತ್ನಾಳ ಅವರಲ್ಲಿ ಮನವಿ ಮಾಡಿರುತ್ತಾರೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಇತ್ತೀಚೆಗೆ ನಡೆದ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಈ ವಿಷಯ ಸಮಗ್ರ ಚರ್ಚೆಯಾಗಿದೆ. ಆದ್ದರಿಂದ ಈ ಕುರಿತು 15 ದಿನದೊಳಗಾಗಿ ಕಾನೂನು ರೀತ್ಯಾ ಸೂಕ್ತ ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಆಯೋಗದ ಸದಸ್ಯರು ಸೂಚಿಸಿದ್ದಾರೆ.

ಗಂಗಾವತಿ ನಗರದಲ್ಲಿ ಮಕ್ಕಳ ಭಿಕ್ಷಾಟನೆ ಮಾಡುತ್ತಿರುವ ಹೆಣ್ಣು ಮಕ್ಕಳು ಹೆಚ್ಚಾಗಿ ಕಂಡುಬರುತ್ತಿದ್ದು, ಗ್ಯಾರೇಜ್, ಅಂಗಡಿಗಳು ಮತ್ತು ಇನ್ನಿತರ ವ್ಯಾಪಾರ ವಹಿವಾಟಿನಲ್ಲಿ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ದೂರು ಸಲ್ಲಿಕೆಯಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಆಯೋಗದ ಸದಸ್ಯರು ಸೂಚನೆ ನೀಡಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕೂಡಲೇ ಗಮನ ಹರಿಸಿ ಕ್ರಮ ವಹಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರಕಟಣೆ ತಿಳಿಸಿದೆ.

# ಗ್ರಾಮಸ್ಥರ ಅಹವಾಲು ಆಲಿಸಿದ ಶಾಸಕ ಗವಿಯಪ್ಪ

ಮೊದಲ ಪುಟದಿಂದ

ತಾಪಂ ಇಓ ಅವರಿಗೆ ನಿರ್ದೇಶನ ನೀಡಿದರು. ಇದೆ ವೇಳೆ ಶುದ್ಧ ಕುಡಿಯುವ ನೀರಿನ ಘಟಕದ ವೀಕ್ಷಣೆ ನಡೆಸಿದರು. ಘಟಕವು ಏಕೆ ಸ್ಥಗೀತವಾಗಿದೆ ಎಂದು ಅಧಿಕಾರಿಗಳಿಗೆ ಕೇಳಿ ಅದನ್ನು ಕೂಡಲೇ ಸರಿ ಮಾಡಬೇಕು ಎಂದು ಏಜೆನ್ಸಿಯವರಿಗೆ ತಿಳಿಸಲು ಶಾಸಕರು ನಿರ್ದೇಶನ ನೀಡಿದರು. ಶಾಸಕರು ನಿರ್ದೇಶನ ನೀಡಿದ ಕೆಲವೇ ಗಂಟೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕವು ದುರಸ್ಥಿಯಾಗಿ ಅದಕ್ಕೆ ಚಾಲನೆ ಸಿಕ್ಕಿದ್ದು ವಿಶೇಷವಾಗಿತ್ತು.

ಹೊಸಮಪಲನಗುಡಿ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿನ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಅಲ್ಲಿನ ಶಿಕ್ಷಕರು ಮತ್ತು ಮಕ್ಕಳೊಂದಿಗೆ ಮಾತನಾಡಿದರು. ಶಾಲೆಯ ಕಟ್ಟಡ ಮತ್ತು ಅಲ್ಲಿನ ಮೂಲಸೌಕರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಗ್ರಾಮದಲ್ಲಿ ಜೆಜೆಎಂ ಕಾಮಗಾರಿ ಕಳಪೆಯಾಗಿದೆ ಎಂದು ಗ್ರಾಮಸ್ಥರು ದೂರಿದರು. ಕೂಡಲೇ ಪೈಪಲೈನ್ ಕಾಮಗಾರಿಯನ್ನು ಸರಿ ಮಾಡಬೇಕು ಎಂದು ಶಾಸಕರು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಬದಲಿ ವಿದ್ಯುತ್ ಕಂಬ ಕೇಳಿದಾಗ, ವಿದ್ಯುತ್ ತಂತಿ ಹರಿದು ಬಿದ್ದಾಗ, ಹೊಸ ವಿದ್ಯುತ್ ಲೈನ್ ಸಂಪರ್ಕ ಬೇಕು ಎಂದು ಕೇಳಿದಾಗ ಜೆಸ್ಕಾಂ ಅಧಿಕಾರಿಗಳು ಕಿಂಚಿತ್ತು ನಮಗೆ ಸ್ಪಂದನೆ ನೀಡುತ್ತಿಲ್ಲ ಎಂದು ಹೊಸಮಲಪನಗುಡಿಯ ಗ್ರಾಮಸ್ಥರು ಜೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅಧಿಕಾರಿಗಳಿಗೆ ಸ್ಪಂದನೆ ನೀಡಬೇಕು. ಇಲ್ಲದಿದ್ದಲ್ಲಿ ಶಿಸ್ತುಕ್ರಮಕ್ಕೆಕ್ರಮ ವಹಿಸಲಾಗುವುದು ಎಂದು ಶಾಸಕರು ಜೆಸ್ಕಾಂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಇದೆ ವೇಳೆ ಶಾಸಕರು ಹತ್ತಿರದಲ್ಲಿದ್ದ ಎಲ್ ಭರಮಪ್ಪ ಶಾಲೆ ಮತ್ತು ಅಂಗನವಾಡಿಗೆ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಾದ ಹರೀಶ್ ಅವರು ಅಚ್ಚುಕಟ್ಟಾಗಿ ಸಿದ್ದಪಡಿಸಿದ್ದ ಶಾಸಕರ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರು ಒಬ್ಬೊಬ್ಬರಾಗಿ ಸಾಲಾಗಿ ಬಂದು ಶಾಸಕರಿಗೆ ತಮ್ಮ ತಮ್ಮ ಅಹವಾಲು ಸಲ್ಲಿಸಿದರು. ಶಾಸಕರು ಅರ್ಜಿ ಸಲ್ಲಿಸಿದ ಪ್ರತಿಯೊಬ್ಬರೊಂದಿಗೂ ಮಾತನಾಡಿ ಅಧಿಕಾರಿಗಳ ಸಮ್ಮುಖದಲ್ಲಿ ಅರ್ಜಿಯ ಬಗ್ಗೆ ಪರಸ್ಪರ ಚರ್ಚಿಸಿ ಸಾರ್ವಜನಿಕರಿಗೆ ಸ್ಪಂದನೆ ನೀಡಿದ್ದರಿಂದಾಗಿ ಸಾರ್ವಜನಿಕರು ಶಾಸಕರ ಕಾಳಜಿ, ಸ್ಪಂದನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ನಿವೇಶನ, ವಸತಿ ಸೌಕರ್ಯಕ್ಕೆ ಕ್ರಮ ವಹಿಸಿ:** ಶಾಸಕರಿಗೆ ಸಲ್ಲಿಕೆಯಾದ ಅರ್ಜಿಗಳ ಪೈಕಿ ಬಹುತೇಕ ಅರ್ಜಿಗಳು ಮನೆ ಕಟ್ಟಲು ಜಾಗ ಬೇಕು ಮತ್ತು ವಸತಿ ಸೌಕರ್ಯ ನೀಡಬೇಕು ಎನ್ನುವ ಬೇಡಿಕೆಯನ್ನು ಹೊಂದಿದ್ದವು. ಈ ಬಗ್ಗೆ ಪರಿಶೀಲಿಸಿದ ಶಾಸಕರು, ಗಾಳೆಮ್ಮನಗುಡಿ ಹತ್ತಿರದ ಕಲ್ಲುಗುಡ್ಡ ಪ್ರದೇಶ ಮತ್ತು ಮಲಪನಗುಡಿ ಹತ್ತಿರದ ಕಲ್ಲುಗುಡ್ಡ ಪ್ರದೇಶದಲ್ಲಿ ಬಂಡೆಗಳನ್ನು ಬ್ಲಾಸ್ಟ್ ಮಾಡಲು ಹಂಪಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕಾರಣಗಳಿಂದ ತೊಂದರೆ ಇಲ್ಲದ್ದಿದ್ದಲ್ಲಿ ಬಂಡೆಗಳನ್ನು ಬ್ಲಾಸ್ಟ್ ಮಾಡಿ ಸಮತಟ್ಟಾಗಿಸಿ ಗುಡ್ಡದ ಪ್ರದೇಶದಲ್ಲಿ ಮನೆ ನಿರ್ಮಿಸಿಕೊಳ್ಳುವ ವಿಧಾನದಲ್ಲಿ ಎಂಜಿನಿಯರಿಂದ ಸೂಕ್ತವಾದ ಡಿಸೈನ್ ಮಾಡಿಸಿ ಆ ಜಾಗದಲ್ಲಿ ಅರ್ಹರಿಗೆ ನಿವೇಶನಗಳ ಹಂಚಿಕೆಗೆ ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿಗಳಿಗೆ ಸೂಚನೆ: ಆಯಾ ಗ್ರಾಮಸ್ಥರ ಬೇಡಿಕೆಯಂತೆ ಎಲ್ಲಾ ಕಡೆಗಳಲ್ಲಿ ಆದ್ಯತೆಯ ಮೇರೆಗೆ ಸಿಸಿ ರಸ್ತೆ ನಿರ್ಮಾಣ, ಚರಂಡಿ ಶುಚಿತ್ವ ಮತ್ತು ದುರಸ್ತಿಗೆ, ಕುಡಿಯುವ ನೀರಿನ ವ್ಯವಸ್ಥೆಗೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಶಾಸಕರು ಹೊಸಪೇಟೆ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಮತ್ತು ಮಲಪನಗುಡಿಯ ಗ್ರಾಮ ಪಂಚಾಯಿತಿ ಪಿಡಿಓ ಅವರಿಗೆ ನಿರ್ದೇಶನ ನೀಡಿದರು.

**ಪಿಎಚ್‌ಸಿ ಮೇಲ್ದರ್ಜೇಗೇರಿಸಲು ಕ್ರಮ:** ಹಳೆಮಲಪನಗುಡಿ ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 24/7 ಆಗಿ ಮೇಲ್ದರ್ಜೆಗೇರಿಸಲು ಇದೆ ವೇಳೆ ಗ್ರಾಮಸ್ಥರು ಮನವಿ ಮಾಡಿದರು.

**ಮಕ್ಕಳೊಂದಿಗೆ ಬೆರೆತ ಶಾಸಕರು:** ಜನ ಸಂಪರ್ಕ ಕಾರ್ಯಕ್ರಮ ಮತ್ತು ಸಾರ್ವಜನಿಕ ಅಹವಾಲು ಆಲಿಸಲು ಆಯಾ ಗ್ರಾಮಗಳಲ್ಲಿ ಸಂಚರಿಸುವ ಸಂದರ್ಭದಲ್ಲಿ ಶಾಸಕರು ಆಯಾ ಗ್ರಾಮಗಳ ಎಲ್ಲಾ ಕಡೆಗಿನ ಅಂಗನವಾಡಿಗಳಿಗೆ ಮತ್ತು ಶಾಲೆಗಳಿಗೆ ಖುದ್ದು ಭೇಟಿ ನೀಡಿದ್ದು ವಿಶೇಷವಾಗಿತ್ತು.

**ಎಲ್‌ಕೆಜಿ, ಯುಕೆಜಿ ತರಗತಿಗೆ ಚಾಲನೆ:** ಕಡ್ಡಿರಾಂಪುರ ತಾಂಡ, ಗಾಳೆಮ್ಮನಗುಡಿ, ಹೊಸ ಮಲಪನಗುಡಿ ಮತ್ತು ಹಳೆಮಲಪನಗುಡಿ ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆಯಾ ಗ್ರಾಮದ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಲಪನಗುಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಚಂದ್ರಿಕಾ, ಉಪಾಧ್ಯಕ್ಷರಾದ ದೊರೆರಾಜ್, ಸಿಡಿಪಿಓ ಸಿಂದು ಅಂಗಡಿ, ಕಂದಾಯ, ಆಹಾರ, ಜೆಸ್ಕಾಂ ಸೇರಿದಂತೆ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು, ಆಯಾ ಗ್ರಾಮದ ಮುಖಂಡರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಜು.19ಕ್ಕೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಬಳ್ಳಾರಿ

ಸಂಡೂರು ಜೆಸ್ಕಾಂನ 33/11 ಕೆ.ವಿ ಸಂಡೂರು ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ 11 ಕೆ.ವಿ ಮಾರ್ಗ ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಜು.20 ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಸಂಡೂರು ಪಟ್ಟಣ ಸೇರಿದಂತೆ ಕೃಷ್ಣಾನಗರ, ಸುಶೀಲಾನಗರ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಬರುವ ಗ್ರಾಮಗಳು, ಯಶವಂತನಗರ ಐಪಿಸೆಟ್, ದೇವಗಿರಿ ಐಪಿಸೆಟ್ ಮತ್ತು ಭುಜಂಗನಗರ ಫೀಡರ್‌ಗಳ ವ್ಯಾಪ್ತಿಗೆ ಬರುವ ರೈತರ ಪಂಪ್‌ಸೆಟ್‌ಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸಂಡೂರು ಜೆಸ್ಕಾಂ ಉಪ–ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕೆ.ಎ.ಉಮೇಶ್ ಕುಮಾರ್ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA